523 (622) ಶ್ರೀ ಗೋಪಾಲ ಪೂಜಾರಿ.ಕೆ (ಬೈಂದೂರು) :- ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರ ತಾಲ್ಲೂಕು ಕೆರಾಡಿ ಗ್ರಾಮ ಪಂಚಾಯತ್ ವ್ಯಾಪ್ತಿಯ ಜಡ್ಕಲ್ ಗ್ರಾಮ ಪಂಚಾಯತ್ ವ್ಯಾಪ್ತಿಯ ಬಸ್ರಿಬೇರು ಸೇತುವೆ ರಚನೆ ಕಾಮಗಾರಿಯು ನಕ್ಸಲೇಟ್ ಪ್ಯಾಕೇಜ್ ಮತ್ತು ಪ್ರಕೃತಿ ವಿಕೋಪ ನಿಧಿಯ ಅನುದಾನದಿಂದ ಮಂಜೂರಾತಿಗೊಂಡ ಸೇತುವೆಗೆ ತಾಂತ್ರಿಕ ಮಂಜೂರಾತಿ ದೊರಕಲು ವಿಳಂಬವಾಗಿರುವುದಕ್ಕೆ ಕಾರಣವೇನು;

ಆ) ಕಾಮಗಾರಿಯ ಅಂದಾಜು ಪಟ್ಟಿಯು ಯಾವ ಹಂತದಲ್ಲಿ ಪೆಂಡಿಂಗ್ ಇರುತ್ತದೆ (ವಿವರ ನೀಡುವುದು)?

ಶ್ರೀ ಸಿ.ಎಂ. ಉದಾಸಿ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) ಕುಂದಾಪುರ ತಾಲ್ಲೂಕು ಜಡ್ಕಲ್ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಬರುವ ಬಸ್ರಿಬೇರು ಸೇತುವೆ ರಚನೆ ಕಾಮಗಾರಿಗೆ 2006-07ನೇ ಸಾಲಿನಲ್ಲಿ ಪ್ರಕೃತಿ ವಿಕೋಪ ನಿಧಿ ಅಡಿ ರೂ.5.00 ಲಕ್ಷ ಅನುದಾನ ನಿಗದಿಪಡಿಸಲಾಗಿತ್ತು. ಈ ಕಾಮಗಾರಿಗೆ ನಕ್ಸಲೈಟ್ ಪ್ಯಾಕೇಜ್‌ನಿಂದ ಯಾವುದೇ ಅನುದಾನ ಮಂಜೂರಾತಿಯಾಗಿರುವುದಿಲ್ಲ. ಆದರೆ, ಸದರಿ ಕಾಮಗಾರಿಗೆ ತಯಾರಾದ ಅಂದಾಜು ವೆಚ್ಚದ ಪಟ್ಟಿಯು ರೂ.17.00 ಲಕ್ಷಗಳಾಗಿದ್ದು, ಈ ಅಂದಾಜು ಪಟ್ಟಿಗೆ ಅಧೀಕ್ಷಕ ಅಭಿಯಂತರರು ದಿನಾಂಕ : 11-6-2007 ರಂದು ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ. ರೂ.17.00 ಲಕ್ಷಗಳ ಅಂದಾಜು ಪಟ್ಟಿಗೆ ಜಿಲ್ಲಾಧಿಕಾರಿಗಳು ಆಡಳಿತಾತ್ಮಕ ಅನುಮೋದನೆ ನೀಡಬೇಕಾಗಿರುತ್ತದೆ.

ಆ) ಈ ಕಾಮಗಾರಿಯ ಅಂದಾಜು ಪಟ್ಟಿಯು ಆಡಳಿತಾತ್ಮಕ ಅನುಮೋದನೆಯ ಹಂತದಲ್ಲಿ ಬಾಕಿ ಇರುತ್ತದೆ.

524 (908) ಶ್ರೀ ಗೋಪಾಲ ಪೂಜಾರಿ.ಕೆ (ಬೈಂದೂರು) :- ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?